2015 (2519) ಶ್ರೀ ಬಸವರಾಜ್ ರಾಯರೆಡ್ಡಿ (ಯಲಬುರ್ಗಾ) :– ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಅನಧಿಕೃತವಾಗಿ ನಡೆಸುತ್ತಿರುವ ಶಾಲೆಗಳು ಯಾವುವು (ಅವುಗಳ ಹೆಸರುಗಳ ಸಹಿತ ಪ್ರತಿ ಜಿಲ್ಲೆ ಮತ್ತು ತಾಲ್ಲೂಕುವಾರು ವಿವರಗಳನ್ನು ಒದಗಿಸುವುದು);

ಆ) ಈ ಶಾಲೆಗಳಲ್ಲಿ ಕಲಿಯುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು; ಈ ಅನಧಿಕೃತ ಶಾಲೆಗಳನ್ನು ಮುಚ್ಚಲು ಸರಕಾರವು ಆದೇಶಿಸಿದೆಯೇ;

ಇ) ಹಾಗಿದ್ದಲ್ಲಿ, ಈ ಶಾಲೆಗಳಲ್ಲಿ ಕಲಿಯುತ್ತಿರುವ ವಿದ್ಯಾರ್ಥಿಗಳಿಗೆ ಸರಕಾರವು ಯಾವ ರೀತಿ ಪರ್ಯಾಯ ವ್ಯವಸ್ಥೆಯನ್ನು ಮಾಡಿದೆ;

ಈ) ಈ ಅನಧಿಕೃತ ಶಾಲೆಗಳು ಯಾವ ಮಾಧ್ಯಮದಲ್ಲಿ ನಡೆಸಲ್ಪಡುತ್ತಿದೆ;

ಉ) ಈ ಅನಧಿಕೃತ ಶಾಲೆಗಳು ಮುಂದಿನ ವರ್ಷಗಳಲ್ಲಿ ಸಕ್ರಮಗೊಳಿಸಲಾಗುವುದೆ?

ಶ್ರೀ ಬಸವರಾಜ ಎಸ್. ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) ಸರ್ಕಾರದ ಭಾಷಾ ಮಾಧ್ಯಮ ನೀತಿಯ ಪ್ರಕಾರ ಖಾಸಗಿ ಪ್ರಾಥಮಿಕ ಶಾಲೆಗಳಲ್ಲಿ 1ನೇ ತರಗತಿಯಿಂದ 5ನೇ ತರಗತಿಯವರೆಗೆ ಮಾತೃಭಾಷೆ ಅಥವಾ ಕನ್ನಡ ಮಾಧ್ಯಮದಲ್ಲಿ ಕಲಿಸದೇ ಇಂಗ್ಲಿಷ್ ಮಾಧ್ಯಮದಲ್ಲಿ ಕಲಿಸಿ ಭಾಷಾ ಮಾಧ್ಯಮ ನೀತಿ ಉಲ್ಲಂಘಿಸಿದ 2215 ಶಾಲೆಗಳ ಮಾನ್ಯತೆಯನ್ನು ಸಕ್ಷಮ ಪ್ರಾಧಿಕಾರಗಳು ಹಿಂಪಡೆದಿರುತ್ತಾರೆ. (ಶಾಲೆಗಳ ವಿವರವನ್ನು ಪಟ್ಟಿಯಲ್ಲಿ ಒದಗಿಸಿದೆ)

ಆ) ಈ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ 300526

ಸದರಿ ಶಾಲೆಗಳ ಮಾನ್ಯತೆಯನ್ನು ಸಕ್ಷಮ ಪ್ರಾಧಿಕಾರಗಳು ಶೈಕ್ಷಣಿಕ ವರ್ಷದ ಮಧ್ಯದಲ್ಲಿ ಹಿಂಪಡೆದು ಆದೇಶಗಳನ್ನು ಹೊರಡಿಸಿದ್ದು. ಆ ಹಂತದಲ್ಲಿ ವಿದ್ಯಾರ್ಥಿಗಳನ್ನು ಇತರೆ ಯಾವುದೇ ಶಾಲೆಗೆ ಸೇರಿಸಿದಲ್ಲಿ ಅವರ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆಂಬ ಕಾರಣಕ್ಕಾಗಿ, ಆ ಆದೇಶಗಳ ಜಾರಿಗೊಳಿಸುವಿಕೆಯನ್ನು ದಿ. 10.4.2007' ರವರೆಗೆ ತೆಡಹಿಡಿಯತಕ್ಕದ್ದೆಂದು ಸರ್ಕಾರದ ದಿ. 6.11.2006ರ ಆದೇಶ ಸಂಖ್ಯೆ ಇಡಿ. 203 ಪಿಜಿಸಿ 2006 ರನ್ವಯ ನಿರ್ದೇಶಿಸಲಾಗಿದೆ.

ಇ) ಇಂತಹ ಆಂಗ್ಲ ಮಾಧ್ಯಮ ಶಾಲೆಗಳಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ಮಕ್ಕಳಿಗೆ, ಮುಂದಿನ ಶೈಕ್ಷಣಿಕ ಸಾಲಿನಿಂದ ಸದರಿ ಶಾಲೆಗಳ ಸುತ್ತಮುತ್ತಲಿನ ಸರ್ಕಾರಿ ಶಾಲೆಗಳು, ಅನುದಾನಿತ ಶಾಲೆಗಳು ಹಾಗೂ ಅನುದಾನರಹಿತ ಪ್ರಾಥಮಿಕ ಶಾಲೆಗಳಲ್ಲಿ ವಿದ್ಯಾಭ್ಯಾಸ ಮುಂದುವರೆಸಲು ಪರ್ಯಾಯ ವ್ಯವಸ್ಥೆ ಕಲ್ಪಿಸಲು ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರಿಗೆ ತಿಳಿಸಲಾಗಿದೆ.

ಈ) ಇಂಗ್ಲೀಷ್ ಮಾಧ್ಯಮದಲ್ಲಿ.

ಉ) ಸರ್ಕಾರದ ಭಾಷಾ ಮಾಧ್ಯಮ ನೀತಿಯನ್ನು ಉಲ್ಲಂಘಿಸಿದ ಶಾಲೆಗಳ ಮಾನ್ಯತೆಯನ್ನು ಹಿಂಪಡೆಯಲು ಸಕ್ಷಮ ಪ್ರಾಧಿಕಾರಗಳು ತೆಗೆದುಕೊಂಡ ಕ್ರಮದಿಂದ ಉದ್ಭವಿಸಿದ ಪರಿಸ್ಥಿತಿಯನ್ನು ಪರಿಶೀಲಿಸಿ, ಸಚಿವ ಸಂಪುಟಕ್ಕೆ ಸೂಕ್ತ ಶಿಫಾರಸ್ಸುಗಳನ್ನು ಮಾಡಲು ಸಚಿವ ಸಂಪುಟ ಉಪ ಸಮಿತಿಯನ್ನು ರಚಿಸಲಾಗಿದೆ. ಈ ರೀತಿ ಈ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ.

2016 (2380) ಶ್ರೀ ಎ.ಎಸ್. ಬಸವರಾಜು (ಅರಸೀಕೆರೆ) :– ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ಮಹಾನಗರವನ್ನೊಳಗೊಂಡಂತೆ, ರಾಜ್ಯದ ವಿವಿಧ ಭಾಗಗಳಲ್ಲಿ ಹೊಸದಾಗಿ ಮಂಜೂರಾಗಿರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಸಂಖ್ಯೆ ಎಷ್ಟು ಹಾಗೂ ಆ ಪೈಕಿ ಬೆಂಗಳೂರು ನಗರಕ್ಕೆ ಮತ್ತು ಹಾಸನ ಜಿಲ್ಲೆಗೆ ಮಂಜೂರಾದ ಕಾಲೇಜುಗಳೆಷ್ಟು (ಸ್ಥಳ, ಹೆಸರು ಸಹಿತ ಸಂಖ್ಯೆ ವಿವರ ನೀಡುವುದು);

ಆ) ಈ ಕಾಲೇಜುಗಳನ್ನು ಯಾವ ಶೈಕ್ಷಣಿಕ ವರ್ಷದಿಂದ ಪ್ರಾರಂಭಿಸಲಾಗಿದೆ, ಮಂಜೂರಾತಿಯಾಗಿದ್ದು ಯಾವಾಗ;

ಇ) ಇವು ಹಾಲಿ ಕಾರ್ಯಾರಂಭಗೊಂಡಿವೆಯೇ ಇದಕ್ಕಾಗಿ ನೀಡಿರುವ ಹಣವೆಷ್ಟು ಹಾಗೂ ಇವುಗಳಿಗೆ ಕಟ್ಟಡಸೌಲಭ್ಯ ಕಲ್ಪಿಸಲಾಗಿದೆಯೇ ಇಲ್ಲದಿದ್ದಲ್ಲಿ ಯಾವ ವ್ಯವಸ್ಥೆ ಮಾಡಲಾಗಿರುತ್ತದೆ;

ಈ) ಈ ಕಾಲೇಜುಗಳಿಗೆ ಸ್ವಂತ ಕಟ್ಟಡಗಳನ್ನು ಯಾವಾಗ ನಿರ್ಮಿಸಲಾಗುತ್ತದೆ ಅಲ್ಲದೇ ಇವುಗಳಿಗೆ ಅಗತ್ಯ ಬೋಧಕ, ಗ್ರಂಥಪಾಲಕರು ಸೇರಿದಂತೆ ಇತರೆ ಬೋಧಕೇತರ ಸಿಬ್ಬಂದಿಗಳನ್ನು ಹುದ್ದೆ ಸಮೇತ ಮಂಜೂರಾತಿ ಮಾಡಲಾಗಿದೆಯೇ, ಇಲ್ಲದಿದ್ದಲ್ಲಿ ಕಾರಣಗಳೇನು;

ಉ) ಈ ನಿಟ್ಟಿನಲ್ಲಿ ಬೆಂಗಳೂರಿನಲ್ಲಿ ಹಾಲಿ ಕಾರ್ಯನಿರ್ವಹಿಸುತ್ತಿರುವ ಈ ಹಿಂದಿನ ವಿವಿಧ ಸರ್ಕಾರಿ ಕಾಲೇಜುಗಳಲ್ಲಿ ಎರಡೆರಡು ಗ್ರಂಥಪಾಲಕರ ಹುದ್ದೆಗಳಿರುವುದು ನಿಜವೇ;

ಊ) ಹಾಗಿದ್ದಲ್ಲಿ, ಈ ಹುದ್ದೆಗಳು ಪ್ರಸ್ತುತ ಚಾಲ್ತಿಯಲ್ಲಿವೆಯೇ ಆ ಹುದ್ದೆಗಳೆಷ್ಟು, ಅವುಗಳನ್ನು ಬೇರೆ ಕಾಲೇಜು ಸ್ಥಳಕ್ಕೆ ಸ್ಥಳಾಂತರಿಸಿ ಆದೇಶ ಮಾಡಲಾಗಿದೆಯೇ;

ಋ) ಮಾಡದಿದ್ದಲ್ಲಿ, ಎಲ್ಲಿಗೆ ವರ್ಗಾವಣೆ ಮಾಡಲಾಗಿರುತ್ತದೆ;

ಋೂ) ಇದಕ್ಕೆ ಕಾರಣಗಳೇನು (ಸಂಪೂರ್ಣ ವಿವರ ಒದಗಿಸುವುದು)?